3) ನಿರ್ಮಿಸಬೇಕಾದ ರಸ್ತೆಯ ಸ್ವಲ್ಪ ಭಾಗವನ್ನು ಭೂ ಸ್ವಾಧೀನತೆ ಮತ್ತು ಲಿಟಿಗೇಶನ್‌ಗಳ ಕಾರಣ ಗುತ್ತಿಗೆದಾರರಿಗೆ ಬಿಟ್ಟು ಕೊಡದೇ ಇರುವುದು.

4) ಬಾಕ್ಸ್ ಮೋರಿಗಳ ಬದಲಾಗಿ ಪೈಪ್ ಮೋರಿಗಳ ಅಳವಡಿಕೆಯಿಂದ.

5) ರಸ್ತೆಯ ಒಳ್ಳೆಯ ಗ್ರೇಡಿಯಂಟ್‌ಗಾಗಿ ಅಲೈಯಿನ್‌ಮೆಂಟ್ ಬದಲಾವಣೆಯಿಂದ.

6) ಅಗೆತದಲ್ಲಿ ಉಂಟಾದ ಗಟ್ಟಿ ಕಲ್ಲಿನ ಹೆಚ್ಚಳದ ಕಾರಣ.

7) ಕೆಲಸದ ಪರಿಸರದಲ್ಲಿ ಬರುವ ಎಲೆಕ್ಟ್ರಿಕಲ್ ಕಂಬಗಳನ್ನು ಸಮಯದಲ್ಲಿ ಬದಲಿಸದೇ ಇರುವುದು. ಈ ಕೆಲಸವನ್ನು 31.5.97ರ ರೊಳಗಾಗಿ ಮುಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

(ಊ) ಕರ್ನಾಟಕ ವಿದ್ಯುತ್ ನಿಗಮದ ತಾಂತ್ರಿಕ ಪರಿಶೋಧನಾ ವಿಭಾಗದಿಂದ ವಿಚಾರಣೆ ಮಾಡಿಸಿದ ನಂತರ, ಮುಂದಿನ ಕ್ರಮದ ಬಗ್ಗೆ ಪರಿಶೀಲಿಸಲಾಗುವುದು.

ಹಿರೇಕೆರೂರು ತಾಲ್ಲೂಕು ಹಳೂರು ಭಾಗದಲ್ಲಿ ಕಡಿಮೆ ವೋಲ್ಟೇಜ್ ಸಮಸ್ಯೆ

192(275) ಶ್ರೀ ಯು. ಆರ್.ಬಣಕಾರ್ (ಹಿರೇ ಕೆರೂರು.):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹಿರೇಕೆರೂರು ತಾಲ್ಲೂಕು ಹಳೂರು ಭಾಗದಲ್ಲಿ ಲೋವೋಲ್ಟೇಜ್ ಸಮಸ್ಯೆ ಇರುವುದರಿಂದ ಅಲ್ಲಿಯ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ ಯಾವಾಗ ಪರಿಹರಿಸಲಾಗುವುದು?

ಶ್ರೀ ಶರಣಬಸಪ್ಪದರ್ಶನಪುರ (ಇಂಧನ ರಾಜ್ಯ ಸಚಿವರು.)

(ಅ) ಹೌದು

(ಆ) ವೋಲ್ಟೇಜ್ ಪರಿಸ್ಥಿತಿಯ ಸುಧಾರಣೆಗಾಗಿ ಹಳೂರು 11 ಕೆ.ವಿ.ಫೀದರ್‌ಗ, ಒಂದು ವೋಲ್ಟೇಜ್ ರೆಗ್ಯೂಲೇಟರನ್ನು ಇನ್ನು ಎರಡು ಅಥವಾ ಮೂರು ತಿಂಗಳೊಳಗೆ ಅಳವಡಿಸಲು ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಮಾಗಡಿ ತಾಲ್ಲೂಕಿನ ತೂಬಿನಕೆರೆ ಮತ್ತು ತಗ್ಗಿಕುಪ್ಪೆ ಗ್ರಾಮಗಳಲ್ಲಿ ಹೊಸಕೆರೆ ನಿರ್ಮಾಣ

196 (374) ಶ್ರೀ ಹೆಚ್.ಸಿ.ಬಾಲಕೃಷ್ಣ. (ಮಾಗಡಿ):

ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಮಾಗಡಿ ತಾಲ್ಲೂಕಿನ ತೂಬಿನ ಕೆರೆ ಮತ್ತು ತಗ್ಗಿ ಕುಪ್ಪೆ ಗ್ರಾಮಗಳಲ್ಲಿ ಹೊಸ ಕೆರೆಗಳನ್ನು ನಿರ್ಮಾಣ ಮಾಡುವ ಪ್ರಸ್ತಾಪವು ಸರ್ಕಾರದ ಮುಂದಿದೆಯೇ;

(ಆ) ಹಾಗಿದ್ದಲ್ಲಿ, ಯಾವಾಗ ನಿರ್ಮಾಣ ಕಾರ್ಯ ಪ್ರಾರಂಭವಾಗುವುದು, ಈ ಕೆರೆ ನಿರ್ಮಾಣದ ಒಟ್ಟು ಅಂದಾಜು ಮೊತ್ತ ಎಷ್ಟು ನಿರ್ಮಾಣದ ಪ್ರಸ್ತಾಪವು ಈಗ ಯಾವ ಹಂತದಲ್ಲಿದೆ?

ಶ್ರೀ ತಿಪ್ಪೇ ಸ್ವಾಮಿ, (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು.)

(ಅ) ಇದೆ.

(ಆ) ಕಾಮಗಾರಿಗಳಿಗೆ ಅಂದಾಜು ಮೊತ್ತದ ಶೇ.30 ರಷ್ಟು ಅನುದಾನ ಲಭ್ಯವಾದಲ್ಲಿ, ಆರ್ಥಿಕ ಹಾಗೂ ತಾಂತ್ರಿಕ ಶಕ್ಯತೆಯನ್ನು ಪರಿಗಣಿಸಿ, ಅಂದಾಜಿಗೆ ಅನುಮೋದನೆಯಾದ ನಂತರ ಕೆಲಸ ಪ್ರಾರಂಭಿಸಲಾಗುವುದು.

ತೂಬಿನ ಕೆರೆ ನಿರ್ಮಾಣದ ಅಂದಾಜು ಮೊತ್ತ ರೂ. 44.70 ಲಕ್ಷಗಳು (93-94ನೇ ಸಾಲಿನ ದರಗಳ ಪಟ್ಟಿಯಂತೆ).

ತಗ್ಗಿಕುಪ್ಪೆ ಕೆರೆ ಅಂದಾಜು ಮೊತ್ತ ರೂ. 23.00 ಲಕ್ಷಗಳು (93-94ನೇ ಸಾಲಿನ ದರಗಳ ಪಟ್ಟಿಯಂತೆ).

ಈ ಕಾಮಗಾರಿಗಳ ತಾಂತ್ರಿಕ ಹಾಗೂ ಆರ್ಥಿಕ ಶಕ್ಯತೆಯನ್ನು ಪರಿಶೀಲಿಸಲಾಗುತ್ತಿದೆ.

ಬೀದರ್ ತಾಲ್ಲೂಕಿನ ಗ್ರಾಮಗಳಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳುವುದು.

200(596): ಶ್ರೀ ಬಸವರಾಜ ಪಾಟೀಲ ಅಟ್ಟೂರ (ಬಸವಕಲ್ಯಾಣ)

ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೀದರ್ ತಾಲ್ಲೂಕು ಸೈದಾಪುರ, ವಟ್ಟಗಾವ, ಹೊನ್ನಳ್ಳಿ, ರಾಜನಾಳ ಹಾಗೂ ಭಾಲ್ಕಿ ತಾಲ್ಲೂಕು ಗಿಲಿಗಿಲಿ ಗ್ರಾಮಗಳಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಲು ಸಮೀಕ್ಷೆ ನಡೆಸಲಾಗಿದೆಯೇ;

(ಆ) ಹಾಗಿದ್ದಲ್ಲಿ, ಸದರಿ ಗ್ರಾಮಗಳಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಲು ಸಮೀಕ್ಷೆ ನಡೆಸಲು ಸರ್ಕಾರವು ಆದೇಶ ನೀಡುತ್ತದೆಯೇ;

(ಇ) ಹಾಗಿದ್ದಲ್ಲಿ ಸಣ್ಣ ನೀರಾವರಿ ಯೋಜನೆಗಳಿಗೆ ಕಳೆದ ವರ್ಷ ಹಣವನ್ನು ಮಂಜೂರು ಮಾಡಿದ್ದು ನಿಜವಲ್ಲವೇ;

(ಈ) 1997-98ನೇ ಸಾಲಿನಲ್ಲಿ ಈ ಎಲ್ಲಾ ಗ್ರಾಮಗಳಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ಸರ್ಕಾರವು ಕೈಗೊಳ್ಳುವುದೇ;

(ಉ) ನಬಾರ್ಡ್‌ನಿಂದ ಮೇಲ್ಕಂಡ ನೀರಾವರಿ ಯೋಜನೆಗಳಿಗೆ ಹಣವನ್ನು ಪಡೆಯಲು ಸರ್ಕಾರವು ಕ್ರಮ ಕೈಗೊಂಡಿದೆಯೇ;

ಶ್ರೀ ತಿಪ್ಪೇಸ್ವಾಮಿ, (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು.)

(ಅ) ಆ ಎಲ್ಲಾ ಸಣ್ಣ ನೀರಾವರಿ ಕಾಮಗಾರಿಗಳು 1996-97ರ ಆಯವ್ಯಯದಲ್ಲಿ ಸೇರ್ಪಡೆಯಾಗಿದೆ. ಅವುಗಳಲ್ಲಿ ಹೊನ್ನಳ್ಳಿ, ಹೊಸ ಕೆರೆಯ ಕಾಮಗಾರಿಯನ್ನು ನಬಾರ್ಡ್ ಸಹಾಯ ಧನದೊಂದಿಗೆ ಕೈಗೆತ್ತಿ ಕೊಳ್ಳಲಾಗಿದ್ದು ಈ ಕಾಮಗಾರಿಯು ಪ್ರಗತಿಯಲ್ಲಿದೆ. ಉಳಿದ ಕಾಮಗಾರಿಗಳ ಸಮೀಕ್ಷೆ ನಡೆಸಲಾಗುತ್ತಿದೆ.

(ಆ) ಸದರಿ ಸಣ್ಣ ನೀರಾವರಿ ಯೋಜನೆಗಳಿಗೆ 1995-96ನೇ ಸಾಲಿನಲ್ಲಿ ಅನುದಾನ ಈ ಕೆಳಗಿನಂತೆ ನೀಡಲಾಗಿತ್ತು.